ಬಿಂದು - ೧



# ಶ್ರೀಭಾಗವತ ಬೋಧಾಮೃತ

ಪ್ರೊ ॥ ಕೆ. ಎಸ್. ನಾರಾಯಣಾಚಾರ್ಯ

## ೧. ಶ್ರೀಕೃಷ್ಣಾವತಾರದ ಮರ್ಮಗಳು

ಭಗವಂತ ಮತ್ತು ಭಕ್ತಲೋಕ, ಇವೆರಡರ ಅವಿನಾಸಂಬಂಧವನ್ನೂ, ಭುವಿಗಾಗಿ, ಭಕ್ತರಿಗಾಗಿ ಭಗವಂತ ಏನೆಲ್ಲ ಉದ್ಧಾರ ಕಾರ್ಯಲೀಲೆಗಳನ್ನು ಎಡೆಬಿಡದೆ ಮಾಡುತ್ತಾನೆಂಬುದನ್ನೂ ರಸಪೂರ್ಣ, ಭಾವಪುಷ್ಟ ಭಾಷೆಯಲ್ಲಿ ವರ್ಣಿಸುವ ಭಾರತೀಯ ದಿವ್ಯಗ್ರಂಥಗಳಲ್ಲಿ ಶ್ರೀಮದ್ಭಾಗವತವನ್ನು ಸರಿಗಟ್ಟುವ ಅಥವಾ ಮೀರಿಸುವ ಬೇರೊಂದು ಗ್ರಂಥವಿಲ್ಲ. ಭಾರತಕ್ಕೆ ಸಾಂಸ್ಕೃತಿಕ ಆಪತ್ತು, ವಿಷಮ ಸಾಮಾಜಿಕ ಪರಿಸ್ಥಿತಿಗಳು, ರಾಜಕೀಯ ಪ್ರಕೋಪಗಳು, ಸಮುದಾಯಗಳಲ್ಲಿ ವೈಷಮ್ಯ, ಅಸಮತೆ, ಸ್ವಾರ್ಥ, ದಿಕ್ಕುತಪ್ಪಿಸುವ ಚಳುವಳಿಗಳು, ಹೊರಗಿನವರ ದಂಡಯಾತ್ರೆಗಳು—ಇಂಥವು ಬಿಡಿಬಿಡಿಯಾಗಿ, ಒಗ್ಗೂಡಿ ಬಂದೆರಗಿದಾಗೆಲ್ಲ, ನಮ್ಮನ್ನು ಕಾಪಾಡಿ, ದಿಕ್ಕುತೋರಿ, ಒಗ್ಗೂಡಿಸಿ, ಬೌದ್ಧಿಕ, ಭಾವನಾತ್ಮಕ ಸಮರಸತೆಯನ್ನು ತಂದುಕೊಟ್ಟದ್ದು ಶ್ರೀಭಾಗವತ, ಭಕ್ತಿಸಂದೇಶ, 'ಭಗವಾನುವಾಚ'ಗಳೇ. ಈಗ ಬಂದೊದಗಿರುವ ಪರಿಸ್ಥಿತಿಗೂ ಇದನ್ನೇ ಅನ್ವಯಿಸಿ ಈ ಮಾಲೆಯನ್ನು ಆರಂಭಿಸುವುದಾಗಿದೆ.

ಶ್ರೀಭಾಗವತ ಒಂದು ಅಮೃತಸಾಗರ. ಎತ್ತಣಿಂದ ಇಳಿದು ಸ್ನಾನಪಾನಕ್ಕೆ ಆರಂಭಿಸುವುದೂ ಒಂದೇ. ಮೊದಲು ಭಾಗವತದ ಹೃದಯವಾದ ದಶಮಸ್ಕಂಧದ ಶ್ರೀಕೃಷ್ಣಾವತಾರ ತೀರ್ಥದಲ್ಲಿಳಿದು, ಆಳದ ಈ 'ತಾಮ್ರಪರ್ಣಿಯ' ಮುತ್ತುಗಳನ್ನು ಆರಿಸಿ ಅನುಭವಿಸೋಣ. ಮೊದಲು ಇಲ್ಲಿ ನಮಗೆ ಸವಾಲಾಗುವುದೇ ಅವತಾರ ತತ್ತ್ವ! ಶ್ರೀಕೃಷ್ಣನ ದಿವ್ಯಾದ್ಭುತತತ್ತ್ವ, ವ್ಯಕ್ತಿತ್ವ, ಅನುಷ್ಠಾನ, ಉಪದೇಶ, ಲೀಲೆಗಳು ಎಲ್ಲಾ ನಮಗೆ ಒಗಟೆಗಳೇ, ಕನಕನ ಮುಂಡಿಗೆಗಳೇ! ಏನೂ ತಿಳಿಯುವುದಿಲ್ಲ ಎಂದಲ್ಲ. ಅಷ್ಟಿಷ್ಟು ತಿಳಿಯುತ್ತಾ ಮೋಹ ಪರವಶತೆಯಲ್ಲಿ ನಾವು ಮುಗ್ಧರಾಗಿ, ಅರಿವಿಗೆ ಬಂದದ್ದನ್ನೂ ಕಳೆದುಕೊಂಡುಬಿಡುತ್ತೇವೆ!! ಅದೇ 'ಮೋಹ'—ಅಜ್ಞಾನ, ಜ್ಞಾನಾವರಣ. ನಮ್ಮ ಅರಿವಿನ ಮಹಾಮಿತಿ ನಮ್ಮ ಗಮನಕ್ಕೆ ಬರುವುದೇ ಅವತಾರದ ಸವಾಲಿನಲ್ಲಿ ಎಂಬುದು ಒತ್ತಟ್ಟಿಗಾದರೆ, ಅದರಲ್ಲೂ ಶ್ರೀಕೃಷ್ಣಾವತಾರ, ಅದರ ಪರಮಾವಧಿಗೆ ತಳ್ಳಿ ಮೂಕವಿಸ್ಮಿತವಾಗಿಸುತ್ತದೆ ಎಂಬುದಕ್ಕೆ ಪ್ರಾಚೀನ ಕಾವ್ಯಗಳೂ, ಅರ್ವಾಚೀನ ಕಥೆ ಕಾದಂಬರಿಗಳೂ, ಸಂಗೀತ ಸಾಹಿತ್ಯಾದಿ ಕಲಾಮಾಧ್ಯಮದ ಉನ್ನತ ಕೃತಿಗಳೂ, ಪೂರ್ವಾಚಾರ್ಯರ ಭಾಗವತ ವ್ಯಾಖ್ಯಾನಗಳೂ ಸಾಕ್ಷಿಯಾಗಿವೆ. ಒಂದು ಕಡೆ, ಸತ್ತ ಶಿಶುಪಾಲನ ನಿಂದಾಪರಂಪರೆ ಜೀವಂತವಿದ್ದು ಅಜ್ಞಾನವನ್ನು ಪ್ರದರ್ಶಿಸುತ್ತಿದ್ದರೆ, ಮತ್ತೊಂದು ಕಡೆ, ಮುಕ್ತ ಭೀಷ್ಮನ ಸ್ತುತಿಪರಂಪರೆ ಜೀವಂತವಿದ್ದು, ಜ್ಞಾನಾಜ್ಞಾನದ ಆಚಿನ ನಿಗೂಢತೆಯನ್ನು ಪ್ರದರ್ಶಿಸುತ್ತಾ, ನಡುವೆ ಅಚಲನಾದ ಶ್ರೀಕೃಷ್ಣ ಕೊಳಲನ್ನೂದುತ್ತ, ಅಜ್ಞಾನಿಜ್ಞಾನಿಗಳ, ಭೇದಾತೀತರಾದ ಮುಗ್ಧ ಗೋಪಬಾಲೆಯರಂಥ ಭಕ್ತರನ್ನು, ನಮ್ಮ ನಿಮ್ಮನ್ನು ಮುದಗೊಳಿಸುತ್ತ ನಿಂತೇ ಇದ್ದಾನೆ. ಅದೇ ನಮಗೆ ಪ್ರಸ್ತುತವಾದ ಸತ್ಯ. ತಾಜಮಹಲನ್ನು ಯಾರು ಕಟ್ಟಿಸಿದರೋ? ಅದು ಸತ್ತ ಒಬ್ಬ ದೊರೆಯ ಪತ್ನಿಯ ಮೇಲಣ ಪ್ರೇಮಸಂಕೇತವೋ? ಅಥವಾ ಅದನ್ನು ಕಟ್ಟಿ, ಸತ್ತ ಸಾವಿರಾರು ಶ್ರಮದಾಳುಗಳ ಗುಲಾಮಗಿರಿಯ ಸ್ಮಾರಕವೋ? ತಾಜಮಹಲ್ಲಿಗೆ ಆ ಚಿಂತೆಯಿಲ್ಲ! ಹಾಗಿದ್ದಾನೆ ನಮ್ಮ ಶ್ರೀಕೃಷ್ಣ. 'ದೇವರೆನ್ನಿ!' ಹೂಂ ಎನ್ನುತ್ತಾ, 'ಮನುಷ್ಯ' ಎನ್ನಿ, ಹೂಂ ಎನ್ನುತ್ತಾ, 'ದೆವ್ವ' ಎಂದವರಿಗೂ ಬೇಸರಿಸದೆ, ಸಕಲ ಮೌಲ್ಯಗಳ ಸಾಕಾರನಾಗಿ, ಅಮಾವಾಸ್ಯೆ, ಪೌರ್ಣಿಮೆಗಳಲ್ಲಿ ಕಳೆಗುಂದದೆ, ಹೆಚ್ಚದೆ ನಿರ್ವಿಕಾರನಾಗಿರುವ ಈ ಪರಮಸತ್ಯ ಭಾರತೀಯರಿಗೆ ಇಂದೂ ದಿಕ್ಕು ತೋರಿಸುವ ಮಹಾಜ್ಯೋತಿ.

ಕಳೆದ ಶತಮಾನದ ಆಂಗ್ಲ ಮಹಾಕವಿ ಟಿ.ಎಸ್. ಎಲಿಯೆಟ್ಟನಂಥ ಅಪ್ಪಟ ಕ್ರೈಸ್ತ ಪ್ರಜ್ಞೆಯ ಕವಿಯೂ ಶ್ರೀಕೃಷ್ಣಬೋಧೆಗೆ, ಶ್ರೀಕೃಷ್ಣವ್ಯಕ್ತಿತ್ವಕ್ಕೆ ಮರುಳಾಗಿ, ಶ್ರೀಕೃಷ್ಣಬೋಧಾಮೃತವನ್ನೆಲ್ಲ ಸಂಗ್ರಹಿಸಿರುವ ಈ ಸೂಕ್ತಿಗಳನ್ನು ಮೊದಲು ನೋಡಿ:

**ಸಂಸ್ಕೃತ, ಕನ್ನಡ, ತಮಿಳು ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಅಗಾಧವಾದ ಪಾಂಡಿತ್ಯವನ್ನು ಹೊಂದಿದ್ದು ಹಲವಾರು ಕೃತಿಗಳನ್ನು, ಲೇಖನಗಳನ್ನು ವಿದ್ವತ್ಪೂರ್ಣವಾಗಿ ಬರೆದಿರುವ ಪ್ರೊ. ಕೆ. ಎಸ್. ನಾರಾಯಣಾಚಾರ್ಯರು ಧಾರ್ಮಿಕ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ಪ್ರಸಿದ್ಧ ವಾಗ್ಮಿಗಳಾಗಿಯೂ ಇವರು ಚಿರಪರಿಚಿತರು. ಶ್ರೀಯುತರು 'ವಿವೇಕಪ್ರಭ'ಕ್ಕಾಗಿಯೇ ವಿಶೇಷವಾಗಿ ನೀಡಿರುವ ಪ್ರಸಕ್ತ ಲೇಖನಮಾಲೆಯನ್ನು ಈ ಸಂಚಿಕೆಯಿಂದ ಪ್ರಾರಂಭಿಸುತ್ತಿದ್ದೇವೆ.**

1) I sometimes wonder if that is what Krishna meant—
Among other things—or one way of putting the same thing
That the future is a faded song, a Royal Rose or a Lavender Spray
Of wistful regret for those who are not yet here to regret.

(*The Dry Salvages*, 'Four Quartets', lines 124-128).

"ಶ್ರೀಕೃಷ್ಣ ಏನು ಉಪದೇಶಿಸಿದ? ಅವನು ಬೇರೆ ಏನನ್ನೋ ಉಪದೇಶಿಸಿರಲಿ, ಇದನ್ನೇ ಅಲ್ಲಲ್ಲೆ ಬೇರೆ ರೀತಿಗಳಲ್ಲಿ ಹೇಳಿರಲಿ ಸಾರಸಂದೇಶ ಇಷ್ಟೆ: ಈ ನಮ್ಮ ಜೀವನದಲ್ಲಿ ಈಗ, ಇದೇ ವರ್ತಮಾನದಲ್ಲಿದ್ದೂ ಜೀವನ ವ್ಯರ್ಥವಾಯಿತೆಂದೋ, ತಾನು ಸರಿಯಾಗಿ ತನ್ನನ್ನು ರೂಪಿಸಿಕೊಳ್ಳಲಿಲ್ಲವೆಂದೋ, ಪರಿಪೂರ್ಣತೆಯ ಅವಕಾಶ ತಪ್ಪಿಸಿಕೊಂಡೆನೆಂದೋ ಯಾವನೊಬ್ಬನು ಪರಿತಪಿಸುವುದಿಲ್ಲವೋ, ಇನ್ನಾದರೂ ಪಶ್ಚಾತ್ತಾಪ ಪಟ್ಟು ಈ ವರ್ತಮಾನವನ್ನು ಗಂಭೀರವಾಗಿ ಪರಿಗಣಿಸಿ, ತಿದ್ದಿಕೊಂಡು, ಸರಿಯಾಗಿ ನಡೆಯುವುದಿಲ್ಲವೋ, ಅವನಿಗೆ ಭವಿಷ್ಯ ಎಂಬುದು ಮುಗಿಯಲು ಬಂದಿರುವ ಹಾಡಿನಂತೆ ಮಾತ್ರ ಆಗುತ್ತದೆ; ಅದು ಎಂದೆಂದಿನ ಪರಿತಾಪ ಆಗುತ್ತದೆ. ರಾಜಗುಲಾಬಿ ಎನ್ನುತ್ತಾರೆ. ಅದೊಂದು ಬರೀ ಕಲ್ಪನೆ. ಗುಲಾಬಿಗಳಲ್ಲಿ ರಾಜ, ರಾಣಿ, ಮಂತ್ರಿ, ಸೇನಾಪತಿ ಎಂಬುದಿಲ್ಲ. ಪರಿಮಳವನ್ನು ಕೆಲವರು ಮೈಗೆಲ್ಲಾ ಸಿಂಪಡಿಸಿಕೊಳ್ಳುತ್ತಾರೆ. ಆದರೆ ಅದು ಎಷ್ಟು ಹೊತ್ತು ಉಳಿಯುತ್ತದೆ? ದೊಡ್ಡ ಸುಂದರ ಗುಲಾಬಿಯೊಂದು 'ರಾಜಾ' ಎನಿಸಿ ನಿಜವಾಗಿಯೇ ಇದೆ ಎಂದೂ ಇಟ್ಟುಕೊಳ್ಳಿ. ಬಾಡಲು ಎಷ್ಟು ಹೊತ್ತು ಬೇಕು? ಹಾಗಿದೆ ಜೀವನದ ಅನಿತ್ಯತ್ವ. ಇದರೊಳಗಿದ್ದೇ ನಿತ್ಯತ್ವವನ್ನು, ಅಮರತ್ವವನ್ನು ಸಾಧಿಸಬೇಕೆಂಬುದು ಶ್ರೀಕೃಷ್ಣಸಂದೇಶ."

**ಅನಿತ್ಯಮ್ ಅಸುಖಂ ಲೋಕಂ ಇಮಂ ಪ್ರಾಪ್ಯ ಭಜಸ್ವ ಮಾಂ ॥** (ಗೀತಾ) ಎಂಬುದರ ವ್ಯಾಖ್ಯೆ.

2) ........ Not farewell
But fare forward, voyagers. (ಅದೇ, lines 169-70)

"ಅಯ್ಯಾ ನಾವಿಕರೇ! ಸಮುದ್ರಯಾನ ಹೊರಟಾಗಿದೆ. ಮುಂದೆ ಮುಂದೆ ಸಾಗುತ್ತಿರಬೇಕೇ ವಿನಾ, ಯಾರಿಗೂ ಯಾರೂ ಕೊನೇ ನಮಸ್ಕಾರ, ಶುಭಾಶಯ ಹೇಳುವಂತಿಲ್ಲ! ಏಕೆಂದರೆ ಈ ಯಾತ್ರೆಗೆ ಅಂತ್ಯವಿಲ್ಲ. ಆತ್ಯಂತಿಕ ಅಗಲಿಕೆಯೂ ಇಲ್ಲ. ಮತ್ತೆ ಮತ್ತೆ ಸೇರುತ್ತಲೇ ಇರುತ್ತೇವೆ. ಸಂಬಂಧದಲ್ಲಿಲ್ಲದ ಸತ್ಯ, ಸಖ್ಯ, ಸೌಖ್ಯ, ಬಂಧದಾಚೆ ಇಲ್ಲ. ಏಕೆಂದರೆ ಬಂಧಕ್ಕೆ ಆಚೆಯೇ ಇಲ್ಲದ ನಿರಂತರ ಸಂಬಂಧ ಅದು." ಹೇಗಿದೆ ಸಂಗ್ರಹ!

"ಕಾಲದೇಶಗಳ ಸಂಧಿಬಿಂದುವಿನಲ್ಲಿ ಒಂದು ಐತಿಹಾಸಿಕ ದಿನ ಎಲ್ಲೋ ಒಂದು ಅವತಾರ ಆಗುತ್ತದೆ. ದಿವ್ಯಮಾನುಷಗಳ ಸಂಧಿಬಿಂದು ಅದು. ಮೂರ್ತಾಮೂರ್ತಗಳ ಸಂಧಿಬಿಂದುವೂ ಅದೇ. ಸಾಕಾರ ನಿರಾಕಾರ, ಸಗುಣ ನಿರ್ಗುಣ, ಶಬ್ದ ಶಬ್ದಾತೀತಗಳ ನಿರ್ಣಯಬಿಂದುವೂ ಅಲ್ಲೇ. ಕೃಷ್ಣ ದೇವರೋ? ಮನುಷ್ಯನೋ? ಅದರ ಹಿಂದೇನು? ಮುಂದೇನು? ಅರಸಿ ಅರಸಿ ಮರುಳಾಗುವುದು 'ಕೂಚುಭಟ್ಟ'ನ ಹಣೆಬರೆಹ! ಅವನ ಕರ್ಮ! ಜ್ಞಾನಿಯ ಭಾಗ್ಯ ಬೇರೆ. ಅವತಾರ ಅವನೆದುರಿಗಿದೆ. ಮನುಷ್ಯನೆಲೆಯಲ್ಲೂ ದಿವ್ಯತೆ ಭವ್ಯತೆ, ದೇವನೆಲೆಯಲ್ಲೂ ಮಾನವತೆ, ಮೌಲ್ಯಬದ್ಧತೆ ಅಲ್ಲಿ ಎದ್ದೇ ಕಾಣುತ್ತವೆ. ಅನುಭವಿಸಲು ಭಾಗ್ಯವಿಲ್ಲದ 'ಸಂಶೋಧನೆ'ಗಳು ಏತಕ್ಕೆ?"

3) Men's curiosity searches past and future
And clings to that dimension. But to apprehend
The point of intersection of the timeless
With time, is an occupation for the saint—
..................................................
.........,  in a lifetime's death in love,
Ardour and selflessness and surrender :

(ಅದೇ, lines 199-205)

ಪ್ರೇಮ, ನಿಃಸ್ವಾರ್ಥತೆ, ಶರಣಾಗತಿ, ಇವು ಅವತಾರವನ್ನು ಅರಿಯುವ ಸಾಧನೆಗಳು. ಅದು ಅಕ್ರೂರ, ವಿದುರ, ಕುಂತಿ, ಭೀಷ್ಮ, ಉದ್ಧವ, ಗೋಪಿಯರು, ತ್ರಿವಕ್ರೆ, ಶ್ರೀದಾಮ, ಸುದಾಮ, ಇಂಥ ಭಕ್ತರ ಮಾರ್ಗ.

ನಾವಿರುವುದೇ ಕಾಲಪ್ರಪಂಚದಲ್ಲಿ. ಕಾಲಾತೀತನಾದ ಭಗವಂತ ನಮಗೆ ಈ ಕಾಲದಲ್ಲೇ ಲಭ್ಯನಾಗಬೇಕಲ್ಲವೆ? ಕಾಲಾತೀತವು ಕಾಲದಲ್ಲಿಳಿದು ಬರುವುದೇ ಅವತಾರ. ದೇಶಾತೀತವು ದೇಶಬದ್ಧವಾಗುವುದೇ ಅವತಾರ.

## ೨. ಅವತಾರ, ವಿಸ್ಮಯ, ಅದ್ಭುತ, ಪವಾಡ

ಶ್ರೀಕೃಷ್ಣಾವತಾರದಲ್ಲಿನ ಎಲ್ಲ ಮರ್ಮಗಳನ್ನೂ ಒಂದು ಬಿಡಿಲೇಖನವಾಗಲಿ, ಒಂದು ಇಡೀ ಪುಸ್ತಕವಾಗಲಿ, ಎಂಥ ಲೇಖನಿಯೂ ಪೂರ್ಣ ವಿವರಿಸಿ ಮುಗಿಸಲಾರದು. 'ಮರ್ಮಗಳು ಇವೆ' ಎಂಬುದಷ್ಟನ್ನೇ ನಿರೂಪಿಸಿ ತೋರಿಸಿ, ಅವನ್ನು ಓದುಗರ ಉಪಾಸನೆಗೇ ಬಿಡುವುದು ಈ ಲೇಖನಮಾಲೆಯ ಉದ್ದೇಶ. ಉಪಾಸನೆ ಎಂದರೆ ಅನುಭಾವ, ಯೋಗ, ಹೃದಯಾಂತರಾಳದ ಸಂವೇದನೆ. ಅದನ್ನೇ ಶ್ರುತಿಯು ನಿದಿಧ್ಯಾಸನ, ವೇದನ, ಜ್ಞಾನ ಎಂದಿತ್ತು.

ನಾವಿರುವುದೇ ಕಾಲಪ್ರಪಂಚದಲ್ಲಿ. ಕಾಲಾತೀತನಾದ ಭಗವಂತ ನಮಗೆ ಈ ಕಾಲದಲ್ಲೇ ಲಭ್ಯನಾಗಬೇಕಲ್ಲವೆ? ಕಾಲಾತೀತವು ಕಾಲದಲ್ಲಿಳಿದು ಬರುವುದೇ ಅವತಾರ. ದೇಶಾತೀತವು ದೇಶಬದ್ಧವಾಗುವುದೇ ಅವತಾರ. ಅವನು ದೇವಕಿಯ ಮಗ! ಆದರೂ ಯಾರಿಗೂ ಪುತ್ರನಲ್ಲ!! ಅವನು

ಬಾಲಕ; ಆದರೂ ಬೆಟ್ಟವನ್ನು ಎತ್ತುತ್ತಾನೆ! ಅವನು ಪರಾತ್ಪರ; ಆದರೂ ಗೊಲ್ಲರಲ್ಲಿ, ಗೋಪಿಯರಲ್ಲಿ, ಗೋವುಗಳಲ್ಲಿ ವಿಶೇಷ ಪ್ರೀತಿ ತೋರುತ್ತಾನೆ. ಅವನು ನೀಲಮಣಿಯ ಹೊಳಪಿನ ಸಾಂದ್ರ, ಕರಿ ಮೈಬಣ್ಣದವನು; ಆದರೂ ಎಲ್ಲರಿಗೂ ದಾರಿತೋರುವ ಸ್ವಯಂಪ್ರಕಾಶಕ ಪರಂಜ್ಯೋತಿ; ಯಾರಿಗೂ ಹೆದರದವನು, ಯಶೋದೆಗೆ ಹೆದರುತ್ತಾನೆ; ಬ್ರಾಹ್ಮಣರ ವೇದಾಧ್ಯಯನಕ್ಕೆ, ವಾಕ್ಯಾರ್ಥಕ್ಕೆ ಎಟುಕದವನು; ಆದರೂ ಕೊಟ್ಟಿಗೆಯ ಹಸುಗಳೊಡನೆ ಮಾತಾಡುತ್ತಾನೆ! ಪರಿಶುದ್ಧ ಅಡಿಗೆಗೆ ಬಾಯಿತೆರೆಯದವನು, ಗೊಲ್ಲರ ತಂಗಳನ್ನಕ್ಕೆ ಕೈಚಾಚುತ್ತಾನೆ. ಯಾರ ಕಟ್ಟಿಗೂ ಎಟುಕದವನು ತಾಯಿಯಿಂದ ಸೊಂಟಕ್ಕೆ ಹಗ್ಗ ಕಟ್ಟಿಸಿಕೊಂಡು ಸಂತಸಪಡುತ್ತಾನೆ. ಅದು ನಮಗೆ ಸಂಕಟವಾಗಿ ಕಾಣುತ್ತದೆ. ಆಯುಧ ಹಿಡಿಯದೆಯೇ ಹದಿನೆಂಟು ಅಕ್ಷೌಹಿಣೀ ಸೈನ್ಯವನ್ನು ಸಂಹರಿಸುತ್ತಾನೆ. ಆಚಾರಸಂಹಿತೆ ಹೇಳುತ್ತಾನೆ; ಎಲ್ಲರೊಳು ಬೆರೆಯುತ್ತಾನೆ; ತನಗೆ ಯಾರ ಮೇಲೂ ಹಗೆ, ಅತಿಪ್ರೀತಿ ಇಲ್ಲ ಎನ್ನುತ್ತಾನೆ; ಲೋಕಕಂಟಕರನ್ನು ನಿರ್ದಾಕ್ಷಿಣ್ಯವಾಗಿ ಮುಗಿಸುತ್ತಾನೆ, ಸೋದರಮಾವನೂ ಒಂದೇ, ಸೋದರಳಿಯನೂ ಒಂದೇ! ಮಕ್ಕಳೂ ಒಂದೇ, ಮರಿಮಕ್ಕಳೂ ಒಂದೇ. ತಂತ್ರ ಮಾಡು ತ್ತಾನೆ, ನೀತಿ ಹೇಳುತ್ತಾನೆ! ವಿರೋಧ ಕಾಣಲಾರದ ರೀತಿ ನಮಗೆ ತಿಳಿಯುವುದೇ ಇಲ್ಲ! ಬೈದವರಿಗೆ ಮೋಕ್ಷ ಕೊಡುತ್ತಾನೆ! ಸ್ತುತಿಸಿದವರನ್ನು ಬಂಧನದಲ್ಲೇ 'ಇನ್ನೂ ಇರು' ಎನ್ನುತ್ತಾನೆ. ಅಸಹಾಯಕ ಸ್ತ್ರೀಗೆ ಅಕ್ಷಯವಸ್ತ್ರ ಅನುಗ್ರಹಿಸುತ್ತಾನೆ; ಅಸಹಾಯಕ ಅಬಲೆಯರ, ಕನ್ಯಾಮಣಿಯರ ವಸ್ತ್ರಗಳನ್ನು ಅಪ ಹರಿಸುತ್ತಾನೆ! ಆನೆಯನ್ನು ಕೊಲ್ಲುತ್ತಾನೆ; ಆನೆಯೊಂದಕ್ಕೆ ಅನು ಗ್ರಹಿಸುತ್ತಾನೆ; ಕುದುರೆಯನ್ನು ಕೊಲ್ಲುತ್ತಾನೆ; ತಾನೇ ಕುದುರೆಯ ಮುಖ ತಾಳುತ್ತಾನೆ! ಯಾರಿವನು ಈ ಕೃಷ್ಣ?

"ಅರ್ಜುನ! ನೀನೂ ಹುಟ್ಟುತ್ತೀಯೆ! ನಾನೂ ಹುಟ್ಟಿ ಬರು ತ್ತೇನೆ. ನನ್ನ ಎಲ್ಲ ಜಾತಕಗಳೂ ನನಗೆ ಗೊತ್ತು. ನಿನ್ನದು ಯಾವುದೂ ನಿನಗೆ ಗೊತ್ತಿಲ್ಲ" ಎನ್ನುವ ಶ್ರೀಕೃಷ್ಣ ಏನು ಹೇಳು ತ್ತಿದ್ದಾನೆ? ಅಲ್ಲೇ ಒಂದು ಮರ್ಮ ಇದೆ.

(1) "ನಿನ್ನಂತೆ ನನ್ನದು ತ್ರಿಗುಣಾತ್ಮಕ ಪ್ರಕೃತಿಯಲ್ಲ. ನೀನು ಕರ್ಮವಶನಾದಂತೆ ನಾನಲ್ಲ. ನನ್ನದು ಇಚ್ಛಾಪೂರ್ವಕ ಅವತಾರ. ನಿನ್ನದು ಕರ್ಮಕೃತಜನ್ಮ."**(ಪ್ರಕೃತಿಂ ಸ್ವಾಂ ಅವಷ್ಟಭ್ಯ ಸಂಭವಾಮಿ, ಆತ್ಮಮಾಯಯಾ)**

(2) "ಧರ್ಮಕ್ಕೆ ಮಂಕುಹಿಡಿದಾಗ, ಅಧರ್ಮ ಮೇಲೆದ್ದಾಗ, ನಾನು ಯುಗಭೇದ ನೋಡದೆ ಇಳಿದು ಬರುತ್ತೇನೆ." **(ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ, ಅಭ್ಯುತ್ಥಾನಂ ಅಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ)**

(3) "ಶಿಷ್ಟರ ರಕ್ಷಣೆಗೆ, ದುಷ್ಟರ ಶಿಕ್ಷೆಗೆ, ಧರ್ಮಸಂಸ್ಥಾಪನೆ ಗೆಂದೇ ನಾನು ಇಳಿದು ಬರುತ್ತೇನೆ." **(ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ)**



ಎಂದು ಗೀತೆ (ನಾಲ್ಕನೆಯ ಅಧ್ಯಾಯದಲ್ಲಿ) ಹೇಳುವಂತೆ, ಅವತಾರ ರೀತಿ, ಅವತಾರ ಕಾಲ, ಅವತಾರ ಉದ್ದೇಶ ಇವು ವಿಶಿಷ್ಟ ಮತ್ತು ಮಾರ್ಮಿಕ. ಇವನ್ನೆಲ್ಲ ನಿರ್ಣಯಿಸುವವನು ಅವನೇ. ನಾವಲ್ಲ. ಹುಟ್ಟುವವರೆಲ್ಲ ಅವತಾರಿಗಳಲ್ಲ. ಸಾಯುವವ ರೆಲ್ಲ ಮುಕ್ತರೂ ಅಲ್ಲ. ನಡುವೆ ಸಂಸಾರ ಇದೆ. ಉತ್ತಮಾಧಮ ಗತಿಗಳಿವೆ. ಕರ್ಮ ಇದೆ. ಈಶ್ವರನ ಕೃಪೆಯೂ ಇದೆ. ಏಕೆಂದರೆ ಏನು ಹೇಳಬೇಕು? ವೇದಾಂತ, ತರ್ಕ, ಜಿಜ್ಞಾಸೆ, ಬುದ್ಧಿ, ವಿಚಾರ ಗಳೆಲ್ಲ ಸೋಲುವ ಪರಿಧಿ—ಈ ಪ್ರಶ್ನೆ. "ದೇವರೇಕೆ ಇದ್ದಾನೆ?" ಎಂಬುದು ಅರ್ಥವಿಲ್ಲದ ಪ್ರಶ್ನೆ. ಉಳಿದೆಲ್ಲ ಪ್ರಶ್ನೆಗಳಿಗೂ ಯಾವುದೊಂದು ಉತ್ತರವೋ, ಆ ಉತ್ತರ ಪ್ರಶ್ನಾತೀತವಾಗುತ್ತದೆ. ನಾಟಕದಲ್ಲಿ ರಂಗಭೂಮಿಯ ತೆರೆ, ಪರದೆ ಇರುತ್ತದೆಯಷ್ಟೆ! ನಾಟಕ ನಡೆಯುವ ಮುಂಚೆ ಆ ಪರದೆಯ ಹಿಂದೆ ಏನಿದೆ ಎಂಬ ಪ್ರಶ್ನೆಗೆ ಏನು ಹೇಳಬೇಕು? "ಏನೂ ಇಲ್ಲ" ಎಂಬುದು ಸತ್ಯ. ಆದರೆ ಅದರಲ್ಲಿ 'ರಸ' ಇಲ್ಲ, ಜ್ಞಾನ ಇಲ್ಲ, ಅನುಭವ ಇಲ್ಲ. ಅದು 'ನಾಸದೀಯ' ಸೂಕ್ತದ ಅರ್ಥ. ನಾಟಕ ಮುಗಿದ ಮೇಲೆ ಪಾತ್ರಧಾರಿಗಳೆಲ್ಲ ಎಲ್ಲಿ ಹೋಗುತ್ತಾರೆ? ಎಂಬುದೂ ಅರಸಿಕ ಪ್ರಶ್ನೆ. ಇಂಥವನ್ನು ಕೇಳಿಕೊಂಡೇ ಹಲವರು ನಾಸ್ತಿಕರಾಗಿರುವುದು. ನಾವು ಇಲ್ಲಿ ಜೀವನದಲ್ಲಿ ಇದ್ದೇವೆ. ಇದು ಸತ್ಯ. ಆದರೆ ಕಾಲಬದ್ಧ. ಕಾಲದ ಹಿಂದೆ, ಆಚೆ ಏನಿದೆಯೋ ದೇವರೇ ಬಲ್ಲ. ಕಾರಣವೂ ಅವನೇ, ಕಾರ್ಯವೂ ಅವನೇ! 'ಏಕೆ?' ಎಂದರೆ ಸುಸ್ತಾಗು ತ್ತೇವೆ. ಅದು ದೇವರೆಂಬ ನಿಗೂಢತೆಯ ಮುಚ್ಚಳ! ಕರ್ಮ ಕ್ಕೇನರ್ಥ? ಜೀವಾತ್ಮನ ಸ್ವಾತಂತ್ರ್ಯ ದುರುಪಯೋಗ ಎನ್ನುತ್ತೇವೆ.

ಇದು ಮುಗಿಯುವುದು ಯಾವಾಗ? ಜೀವಾತ್ಮ ಪೂರ್ಣತೆ ಸಾಧಿಸಿದಾಗ. ಅದು ಯಾವಾಗ? ಭಗವಂತನ ಕೃಪೆ ಬಂದಾಗ. ಅದು ಯಾವಾಗ ಬರುತ್ತದೆ? ಗುರು ಕರುಣೆ ದೊರೆತು, ಕರ್ಮವೂ ಕ್ಷೀಣವಾಗುತ್ತ ಬಂದಾಗ ಎನ್ನುತ್ತೇವೆ. ಹಾಗಾದರೆ ನಮಗೆ ಬೇಡದ, ನಾವು ಕೇಳದ ಸ್ವಾತಂತ್ರ್ಯ ಇತ್ತು, ಕಾಲದಲ್ಲಿ ಉರುಳಿಸಿ, ತಳ್ಳುತ್ತಾ, ಕೃಪೆ ತೋರಲು ಕಾಲ ಕಾಯುವ ಈಶ್ವರನಿಗೆ ಇದರಿಂದೇನು ಲಾಭ? ಲೀಲೆ, ವಿನೋದ, ಎನ್ನುತ್ತದೆ ವೇದಾಂತ. That is the ultimate ground, ultimate principle behind Reality becoming Actual ಎಂದರೆ, ನಮಗೇನೂ ತಿಳಿಯುವುದೇ ಇಲ್ಲ! ಯಾವ ಭಾಷೆಯಲ್ಲೇ ಹೇಳಿ, ದೇವರು ಒಂದು ವಿಸ್ಮಯ, ಪವಾಡ; ಇನ್ನೂ ಹೇಳುವುದಾದರೆ ಅವನೊಂದು 'ವಿರೋಧಾಭಾಸ!' ಹೇಗೆ, ನೋಡಿ:

1) 'ಇಲ್ಲ' ಎನ್ನುವವರಿಗೆ ಅವರು ಇಲ್ಲವೆಂದು ಗ್ರಹಿಸಿದ ಆಕಾರ, ರೂಪ, ಕಾರಣಗಳಿಗಾಗಿ ಅವನು 'ಇಲ್ಲ', ಅಷ್ಟೆ!
2) 'ಇದ್ದಾನೆ' ಎನ್ನುವವರಿಗೆ ಅವರು ಕೊಟ್ಟುಕೊಳ್ಳುವ ಅಲ್ಪ ಕಾರಣಗಳಿಗೂ ಮೀರಿ, ತಾನೇ ತಾನಾಗಿ ಇರುತ್ತಾ, ಬೇರೆಯವರಿಗೆ 'ಇದ್ದಾನೆ' ಎಂಬುದಕ್ಕೆ ಬೇರೆಯೇ ಆಕಾರಾದಿಗಳಲ್ಲಿರುತ್ತಾನೆ.
3) ನಮ್ಮ 'ಇದ್ದಾನೆ', 'ಇಲ್ಲ'ಗಳ ಸಮರ್ಥನೆ, ನಿರಾಕರಣೆಗಳನ್ನು ಮೀರಿ, ತಂತಾನೇ ಇದ್ದಾನೆ. 'ಎಲ್ಲಿ' ಎಂದು ಹೇಳಬರುವುದಿಲ್ಲ. 'ಎಲ್ಲೂ' ಎನ್ನಬೇಕಾಗುತ್ತದೆ. ಅದರಲ್ಲಿ 'ಅಲ್ಲಿ' 'ಇಲ್ಲಿ' 'ಎಲ್ಲಿ?' ಗಳೂ ಸೇರುತ್ತವೆ.
4) ಕೇವಲ 'ಜಡ', ಕೇವಲ 'ಚೇತನ', ಎಂಬುವ ವರ್ಗೀಕೃತ ವಸ್ತುಗಳಲ್ಲೂ ಅವನು ಇರುವ ಪ್ರಯುಕ್ತ ಈ ವರ್ಗೀಕರಣ ಕೃತಕವಾಗಿ ಕಾಣುತ್ತದೆ. Quantum Physics ಎಂಬುದು ಜಡ, ಶಕ್ತಿ (matter and energy)ಗಳ ವರ್ಗೀಕರಣವನ್ನು ತೊಡೆದುಹಾಕಿದಂತೆ, ವೇದಾಂತ ಎಲ್ಲೆಲ್ಲೂ ಈ ದಿವ್ಯ ಚೈತನ್ಯವನ್ನೇ ಕಾಣುತ್ತದೆ. ಅದನ್ನೇ ಆದಿಶಂಕರರು ಕಂಡದ್ದು. ಆ ಒಂದರಲ್ಲೆ ಎಲ್ಲ ಜಡ, ಚೈತನ್ಯಗಳ ವಿವಿಧತೆ ಕಂಡು ವ್ಯಾಖ್ಯಾನಿಸಿದರು ರಾಮಾನುಜರು. ಆ ಒಂದು ಸ್ವತಂತ್ರ, ಉಳಿದೆಲ್ಲ ಪರತಂತ್ರ ಎಂದು ಕಂಡುಕೊಂಡವರು ಆನಂದತೀರ್ಥರು. ಮೂರನ್ನೂ ಕಾಣುವುದು ವಿಶಾಲ ದೃಷ್ಟಿ. ಇಲ್ಲೂ ವಿರೋಧ ಕಾಣುವುದು ಅಲ್ಪ ದೃಷ್ಟಿ. ಅದು ಬುದ್ಧಿಯ ಕಸರತ್ತಿನ, ಕವಾಯಿತಿನ ಕೆಲಸ.
5) ಬುದ್ಧಿಗೆ ಮೀರಿದ್ದು, ಮೇಲೆ ಯಾವುದಿದೆಯೋ ಅದನ್ನು ಬುದ್ಧಿ ಅರಿಯಲಾರದು, ನಿರೂಪಿಸಲಾರದು: ವಾಕ್ಕೂ ಅಷ್ಟೆ, ಮನಸ್ಸೂ ಅಷ್ಟೆ, ಎಲ್ಲ ಇಂದ್ರಿಯಗಳೂ ಅಷ್ಟೆ.
6) ಆದರೆ ಅದು ಬುದ್ಧಿಯನ್ನೂ, ವಾಕ್ಕನ್ನೂ, ಇಂದ್ರಿಯಗಳನ್ನೂ ಚಾಲನೆಗೊಳಿಸುತ್ತದೆ ಎಂದು ಕಂಡು ಹೇಳಿದವರು ಧ್ರುವ, ಪ್ರಹ್ಲಾದ, ನಾರದ, ಶುಕ, ಅಂಬರೀಷ, ಉದ್ಧವ.

ಈಗ ನೋಡಿ, ಕಾಲದಲ್ಲಿ ಶ್ರೀಕೃಷ್ಣ ಏನು ಮಾಡುತ್ತಾನೆ? ಈ ದ್ವಂದ್ವಗಳ, ವಿರೋಧಾಭಾಸಗಳ ಜಗತ್ತಿನಲ್ಲಿ ಸದಾ ಜಾಗರೂಕನಾಗಿರುತ್ತ ನಮ್ಮನ್ನು ಅವ್ಯವಸ್ಥೆಯಿಂದ ವ್ಯವಸ್ಥೆಯತ್ತ, ಅಜ್ಞಾನದಿಂದ ಜ್ಞಾನವೆಂಬ ಬೆಳಕಿನತ್ತ, ಮೃತ್ಯುವಿನಿಂದ ಅಮೃತತ್ತ್ವದತ್ತ ತಳ್ಳುತ್ತಿರುತ್ತಾನೆ. ಅದೇ ಅವನ 'ಜಾರತ್ವ', 'ಚೋರತ್ವ'ಗಳ ಗುಟ್ಟು. ಅವನ ನಿತ್ಯಬ್ರಹ್ಮಚರ್ಯ ಮತ್ತು ಸರ್ವಪತಿತ್ವಗಳ ಗುಟ್ಟು ಇರುವುದೂ ಇಲ್ಲೇ. ಹೇಗೆ? ನೋಡೋಣ.

(ಮುಂದುವರೆಯುವುದು)

## ಭಗವಂತನ ಅವತಾರತತ್ತ್ವ

ಭಗವಂತನ ಅವತಾರತತ್ತ್ವದಲ್ಲಿ ಎರಡು ಮುಖಗಳಿರುತ್ತವೆ : ಒಂದನೆಯದು ನೇರ ಇಳಿಯುವಿಕೆ, ಮನುಷ್ಯತ್ವದಲ್ಲಿ ಭಗವಂತನ ಅವರೋಹಣ; ದೇವರೇ ಮನುಷ್ಯಾಕಾರ, ಸ್ವಭಾವಗಳಲ್ಲಿ ತೋರಿಕೊಳ್ಳುವುದು, ಈ ನಿತ್ಯಾವತಾರದ್ದು. ಎರಡನೆಯದು ಒಂದು ಆರೋಹಣ ಮುಖದ್ದು. ಮನುಷ್ಯನು ಭಗವತ್‌ತತ್ತ್ವದೊಳಗೆ 'ಜನಿಸು'ವುದು, ದೇವಸ್ವಭಾವ, ದೇವಪ್ರಜ್ಞೆಯೊಳಗೆ ಮನುಷ್ಯನ ಆರೋಹಣ, (ಉನ್ನತೀಕರಣ)—ಇದೇ ಮದ್ಭಾವಂ ಆಗತಾಃ ಎಂಬುದು. ಇದೊಂದು ರೀತಿಯ ನೂತನ ಜನ್ಮ, ಆತ್ಮದ ಎರಡನೆಯ ಜನ್ಮ (ಎನ್ನಬಹುದಾದದ್ದು). ಈ ಹೊಸ ಜನ್ಮವನ್ನೇ ಅವತಾರತತ್ತ್ವವು ಎತ್ತಿ ಹಿಡಿಯುತ್ತಾ, ಸಾಧ್ಯ ಮಾಡುತ್ತಾ, ಧರ್ಮರಕ್ಷಣೆಯಿಂದ ಸಾಧಿಸುವುದು. ಈ ದ್ವಿಮುಖಗಳನ್ನೇ ಗೀತೆಯ ಅವತಾರತತ್ತ್ವವು ಹೇಳಿದರೂ, ಮೇಲುನೋಟದ ಓದುಗನಿಗೆ ಕಾಣದೇ ಗಂಭೀರಾರ್ಥಗಳನ್ನು ಬೋಧೆಗಳನ್ನು ಕಳೆದುಕೊಂಡು, ಮೇಲೆ ಕಾಣುವ ಬಾಹ್ಯಾರ್ಥಗಳಲ್ಲೆ ತೃಪ್ತಿಪಟ್ಟುಕೊಳ್ಳುವುದು ಸಂಭವನೀಯವಾಗಿದೆ.—ಶ್ರೀ ಅರವಿಂದರು, (*ಗೀತೆಯ ಕುರಿತ ಪ್ರಬಂಧಗಳು, ಪು. ೧೯೯*)